■ ಹನಿ

# ದೋನಿ ಸಾಗಲಿ..

ಎಲ್ಲರ ಕಣ್ಣು ಈಗ ಮಹೇಂದ್ರಸಿಂಗ್ ದೋನಿ ಮೇಲಿದೆ. ಈ ಸಲ ದೋನಿ ನಾಯಕತ್ವದಲ್ಲಿ ಕ್ರಿಕೆಟ್ ವಿಶ್ವಕಪ್ ಭಾರತಕ್ಕೆ ಸಿಗುತ್ತದೋ ಇಲ್ಲವೋ ಎನ್ನುವುದೀಗ ಮಿಲಿಯನ್ ಡಾಲರ್ ಪ್ರಶ್ನೆ. ಹಿರಿಯರೆಲ್ಲ ಹುರಿದುಂಬಿಸುತ್ತಿದ್ದಾರೆ. ಕಿರಿಯರೆಲ್ಲ ಆತಂಕದಿಂದ ಕಾಯುತ್ತಿದ್ದಾರೆ. ಇದರ ಮಧ್ಯೆ 'ಈ ಸಲ ಕಪ್ ಗೆಲ್ಲೋದು ನಾವೇ' ಎಂದು ದೋನಿ ಹುಂಬ ಧೈರ್ಯದಿಂದ ಘೋಷಣೆ ಮಾಡಿಯೇ ಬಿಟ್ಟಿದ್ದಾರೆ.



'ಭಾರತೀಯ ಕ್ರಿಕೆಟ್ ತಂಡದ ನಾಯಕನ ಹುದ್ದೆ ವಹಿಸಿಕೊಳ್ಳೋದೆಂದರೆ ಬಹಳ ರಿಸ್ಕೀ ಕೆಲಸ' ಅನ್ನುವವರಿದ್ದಾರೆ. ಹುದ್ದೆ ಯಾವತ್ತು ಕೈತಪ್ಪುತ್ತೋ ಗೊತ್ತಿಲ್ಲ. ತಂಡದ ಒಂದು ಹೀನಾಯ ಸೋಲು ಅವರೆಗಿನ ಎಲ್ಲ ವಿಜಯಗಳನ್ನೂ ಹೊಸಕಿ ಹಾಕುತ್ತೆ. ಕ್ರಿಕೆಟ್ ಅಭಿಮಾನಿಗಳು ಆಳಿಗೊಂದರಂತೆ ನಾಯಕನ ಮೇಲೆ ಮಾತಿನ ಕಲ್ಲೆಸೆಯುತ್ತಾರೆ. ತೀರಾ ಇತ್ತೀಚಿನ ಉದಾಹರಣೆ ಸೌರವ ಗಂಗೂಲಿಯೇ ಇದ್ದಾರೆ. ಹಾಗಿರುವಾಗ ದೋನಿಯ 'ಭಂಡ ಧೈರ್ಯ'ವನ್ನು ಮೆಚ್ಚಲೇಬೇಕು.

ದೋನಿ ಕ್ರಿಕೆಟ್ ಜೀವನವೂ ಅಚ್ಚರಿದಾಯಕವೇ. 174 ಒಂದು ದಿನ ಪಂದ್ಯಗಳಲ್ಲಿ 5796 ರನ್ ಹೊಡೆದು 49.96ರ ಸರಾಸರಿ ಹೊಂದಿರುವ ದೋನಿ, ಮಧ್ಯಮ ಕ್ರಮಾಂಕದಲ್ಲಿಯೇ ಈ ಸಾಧನೆ ನಡೆಸಿರೋದು ದೊಡ್ಡ ವಿಷಯ. 7 ಶತಕ, 37 ಅರ್ಧ ಶತಕಗಳನ್ನು ಬಾರಿಸಿರುವ ದೋನಿ, ನಾಯಕತ್ವದ ಒತ್ತಡವನ್ನು ಈವರೆಗೆ ಅದ್ಭುತವಾಗಿಯೇ ನಿರ್ವಹಿಸಿದ್ದಾರೆ. ಒಂದು ದಿನದ ಪಂದ್ಯದಲ್ಲಿ ನಾಟೌಟ್ 183 ರನ್ ಹೊಡೆದು ವ್ಯಕ್ತಿಗತ ದಾಖಲೆಯನ್ನೂ ಮೆರೆದಿದ್ದಾರೆ. ತಮಾಷೆಯೆಂದರೆ ಈವರೆಗೆ ಮೂರು ವಿಶ್ವಕಪ್‌ಗಳಲ್ಲಿ ಆಡಿರುವ ದೋನಿ ಅಲ್ಲಿ ಗಳಿಸಿರುವ ಮೊತ್ತ 29 ರನ್ ಮಾತ್ರ. ಈ ಸಲ ಭಾರತ ತಂಡದ ಆಯ್ಕೆ ವೇಳೆ ನಾಯಕನ ಮಾತೇ ನಡೆದಿದೆ. ಹಾಗಾಗಿ 'ಗೆದ್ದರೂ, ಸೋತರೂ ಅದಕ್ಕೆ ದೋನಿಯೇ ಜವಾಬ್ದಾರಿ' ಎಂಬ ಅಪಾಯದ ಮುನ್ಸೂಚನೆಯೂ ಇದೆ. ದೋನಿ ಸಾಗಲಿ.. ದೂರ ತೀರವ ಸೇರಲಿ.. ಎಂದು ಹಾರೈಸಬಹುದೆ?

# ನೋ ಮುಬಾರಕ್



'ಮುಬಾರಕ್' ಎಂದರೆ ಶುಭಾಶಯ ಎಂದರ್ಥ. ಆದರೆ ಈಜಿಪ್ಟ್‌ನಲ್ಲೀಗ ಎಲ್ಲೆಡೆ 'ನೋ ಮುಬಾರಕ್' ಘೋಷಣೆ ಮೊಳಗುತ್ತಿದೆ. ಈಜಿಪ್ಟಿನ ಅಧ್ಯಕ್ಷ ಮೊಹಮ್ಮದ್ ಹುಸ್ನಿ ಸೈಯದ್ ಮುಬಾರಕ್ ವಿರುದ್ಧ ಲಕ್ಷಾಂತರ ಜನ ಬೀದಿಗಿಳಿದಿದ್ದಾರೆ. 'ತಕ್ಷಣ ತೊಲಗು' ಎಂದು ಅಬ್ಬರಿಸುತ್ತಿದ್ದಾರೆ. ಮುಬಾರಕ್ ಕೂಡಾ ತನ್ನ ಜನರನ್ನು ಛೂಬಿಟ್ಟಿದ್ದಾರೆ. ಬೀದಿ ಕಾಳಗದಲ್ಲಿ ನೂರಾರು ಜನ ಸಾವಿಗೀಡಾಗಿದ್ದಾರೆ.

ಅರಬ್ ರಿಪಬ್ಲಿಕ್ ಆಫ್ ಈಜಿಪ್ಟ್‌ನ ನಾಲ್ಕನೇ ಅಧ್ಯಕ್ಷ ಹುಸ್ನಿ ಮುಬಾರಕ್, ಆ ಹುದ್ದೆಗೆ ಬರುವ ಮುನ್ನ ಒಂದೊಂದೇ ಹೆಜ್ಜೆ ಇಟ್ಟು ಮೇಲೆ ಬಂದಾತ. ಹೈಸ್ಕೂಲ್ ಓದು ಮುಗಿದ ತಕ್ಷಣ ಮಿಲಿಟರಿ ಸೇರಿ, ಅಲ್ಲೇ ಮಿಲಿಟರಿ ಸೈನ್ಸ್ ಪದವಿ ಪಡೆದು, ಪೈಲಟ್ ಆಗಿ ಅಲ್ಲಿಂದ ಏರ್ ಫೋರ್ಸ್ ಮುಖ್ಯಸ್ಥನ ಹುದ್ದೆಗೇರಿದ್ದು ಶ್ರಮದ ಕೆಲಸವೇ. ಆ ಬಳಿಕ ರಕ್ಷಣಾ ಸಚಿವನಾಗಿ, ಉಪಾಧ್ಯಕ್ಷ ಹುದ್ದೆಗೆ ಏರಿದ. ಇಸ್ರೇಲ್ ಜತೆಗೆ ಒಪ್ಪಂದಕ್ಕೆ ಸಹಿ ಹಾಕಿದ ಅಧ್ಯಕ್ಷ ಅನ್ವರ್ ಸಾದಾತ್ ಕೊಲೆಯಾದಾಗ, ಸಹಜವಾಗಿಯೇ ಅಧ್ಯಕ್ಷನಾದ. 29 ವರ್ಷಗಳ ನಿರಂತರ ಆಡಳಿತದಲ್ಲಿ ನಿಧಾನಕ್ಕೆ ಸರ್ವಾಧಿಕಾರಿಯಂತೆ ಬೆಳೆದ. ಪ್ರಜಾಪ್ರಭುತ್ವದ ಮುಖವಾಡದಲ್ಲೇ ವಿರೋಧಿಗಳನ್ನು ಬಗ್ಗುಬಡಿದ.

2005ರಲ್ಲಿ ಅಧ್ಯಕ್ಷೀಯ ಚುನಾವಣೆಗೆ ಬಹು ಅಭ್ಯರ್ಥಿ ಪದ್ಧತಿ ಬಂದರೂ, ರಿಗ್ಗಿಂಗ್ ಮೂಲಕ ಗೆದ್ದ ಮುಬಾರಕ್, ಪ್ರತಿಸ್ಪರ್ಧಿಯಾಗಿದ್ದವನನ್ನು ಕ್ರಿಮಿನಲ್ ಕೇಸ್ ಹಾಕಿ ಜೈಲಿಗೆ ತಳ್ಳಿದ್ದು ಹಳೇ ಕಥೆ. ತನ್ನನ್ನು ಟೀಕಿಸಿ ಕವಿತೆ ಬರೆದವನನ್ನೂ ಜೈಲಿಗೆ ಅಟ್ಟಿದ ಭೂಪನೀತ. ಈಗ ಜನ ಸಿಟ್ಟಿಗೆದ್ದು ಬೀದಿಗಿಳಿದಿರುವಾಗ, 'ಸೆಪ್ಟೆಂಬರ್‌ನಲ್ಲಿ ನಡೆವ ಮುಂದಿನ ಚುನಾವಣೆಗೆ ನಿಲ್ಲೋದಿಲ್ಲ' ಎಂದರೆ ಜನ ನಂಬುತ್ತಿಲ್ಲ. ಹಿಂದೆ 6 ಸಲ ಹತ್ಯೆ ಯತ್ನದಲ್ಲಿ ಉಳಿದುಕೊಂಡಿರುವ ಹುಸ್ನಿ ಮುಬಾರಕ್‌ನನ್ನು ಈ ಸಲ ಅಮೆರಿಕದ ಬೆಂಬಲ ಕೂಡಾ ಉಳಿಸುವಂತೆ ಕಾಣುತ್ತಿಲ್ಲ. ಮುಬಾರಕ್‌ನ ಇಬ್ಬರು ಮಕ್ಕಳಾದ ಅಲಾ ಮತ್ತು ಗಮಾಲ್ ಈಗಾಗಲೆ ದೇಶ ತ್ಯಜಿಸಿದ್ದಾರೆ. ಮುಂದಿನ ಸರದಿ ಈತನದ್ದೇ?

# ಶ್ರೀಮಂತ ಕ್ಯಾಮರೂನ್



ಕಾಲೇಜಿನಲ್ಲಿ ಸಯನ್ಸ್ ತಲೆಗೆ ಹತ್ತದೆ, ಇಂಗ್ಲಿಷ್ ಕೂಡಾ ಕೈಕೊಟ್ಟು ಅರ್ಧಕ್ಕೆ ಹೊರ ಬಂದ ಜೇಮ್ಸ್ ಫ್ರಾನ್ಸಿಸ್ ಕ್ಯಾಮರೂನ್ ಟ್ರಕ್ ಚಾಲಕನಾದದ್ದು ಹಳೇ ಕಥೆ. ಈಗ ಆತ ಹಾಲಿವುಡ್‌ನ ಅತ್ಯಂತ ಶ್ರೇಷ್ಠ ಹಾಗೂ ಶ್ರೀಮಂತ ಲೇಖಕ– ನಿರ್ಮಾಪಕ– ನಿರ್ದೇಶಕ. ಕಳೆದ ವರ್ಷದ ಕೊನೆಗೆ ತೆರೆ ಕಂಡ ಆತನ 'ಅವತಾರ್' ಎಂಬ ತ್ರೀ ಡಿ ಸಿನಿಮಾ, 257 ದಶಲಕ್ಷ ಡಾಲರ್ ಹಣ ದೋಚಿ ವಿಶ್ವದಾಖಲೆ ಮಾಡಿದೆ. 2010ರ ಹಣ ಗಳಿಕೆಯಲ್ಲಿ ಕ್ಯಾಮರೂನ್ ಸ್ಟೀವನ್ ಸ್ಪಿಲ್‌ಬರ್ಗ್‌ನನ್ನೂ ಹಿಂದಿಕ್ಕಿದ್ದಾನೆ.

ದಿ ಟರ್ಮಿನೇಟರ್, ಏಲಿಯನ್ಸ್, ದಿ ಅಬಿಸ್, ಜಡ್ಜ್‌ಮೆಂಟ್ ಡೇ, ಟೈಟಾನಿಕ್– ಹೀಗೆ ಈ ಹಿಂದೆ ಜೇಮ್ಸ್ ನಿರ್ದೇಶಿಸಿದ ಚಿತ್ರಗಳೆಲ್ಲವೂ ಕಾಸು ದೋಚಿದವೇ. ಡಿಜಿಟಲ್ ತ್ರೀ ಡಿ ಫ್ಯೂಶನ್ ಕ್ಯಾಮೆರಾ ಕಂಡು ಹಿಡಿದ ಕ್ಯಾಮರೂನ್‌ಗೆ ನೀರೊಳಗೆ ಶೂಟಿಂಗ್ ಮಾಡುವ ಹುಚ್ಚು! ಈತನನ್ನು ಬಲ್ಲವರು 'ಅರ್ಧ ವಿಜ್ಞಾನಿ, ಅರ್ಧ ಕಲಾವಿದ' ಎನ್ನುತ್ತಾರೆ. ಅಪ್ಪ ಎಲೆಕ್ಟ್ರಿಕಲ್ ಎಂಜಿನಿಯರ್, ಅಮ್ಮ ಕಲಾವಿದೆಯಾಗಿದ್ದು ಈತನ ವ್ಯಕ್ತಿತ್ವವನ್ನೂ ರೂಪಿಸಿದಂತಿದೆ. 57ರ ಹರೆಯದ ಕ್ಯಾಮರೂನ್ ಮೊದಲ ಪತ್ನಿ ಶರೂನ್ ವಿಲಿಯಮ್ಸ್‌ಗಳನ್ನು ತ್ಯಜಿಸಿದ ಮಾಡಿದ ಮೂರು ಕೂಡಿಕೆಗಳೂ ಬರಖತ್ತಾಗಲಿಲ್ಲ. ಆದರೆ ಐದನೆಯ ಪತ್ನಿ ಸೂಜಿ ಅಮಿಸ್ ಜತೆ 11 ವರ್ಷಗಳಿಂದ ಹೊಂದಿಕೊಂಡು ಬಾಳುತ್ತಿದ್ದಾನೆ. ತನ್ನ ಯಶಸ್ಸಿಗೆ ಹೆಂಡತಿಯ ಹೊಂದಾಣಿಕೆಯೂ ಕಾರಣ ಎಂದಿರುವುದು ಸತ್ಯವೇ ಇರಬೇಕು.

Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@deccanherald.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65